# ನವಿಲುಗನ್ನಡಿ

- ಫೆಬ್ರುವರಿ ತಿಂಗಳ 'ಮಯೂರ' ಮಾಸಿಕ ವೈವಿಧ್ಯಮಯವಾಗಿದೆ. ಸಾಕಷ್ಟು ಕಥೆಗಳು ಓದಿಗೆ ಪ್ರೇರಣೆ ನೀಡಿದವು. ವೈ.ಎಸ್.ವಿ. ದತ್ತ ಅವರ ಮಾಸ್ತಿ– ಕುವೆಂಪು ಸಂವಾದ ಮತ್ತು ಸಂಬಂಧ ಕುರಿತ ಲೇಖನ ಹಾಗೂ ಕಲೀಂ ಉಲ್ಲಾ ಅವರ 'ಕಾಡಿಗೆ ಕಣ್ಣು' ಅಂಕಣದ ಭದ್ರೆಯ ಚಿರತೆ ಕುರಿತ ಬರಹ ಇಷ್ಟವಾಯಿತು.

**ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್. ಪೇಟೆ, ಮಂಡ್ಯ**

- ಫೆಬ್ರುವರಿ ಸಂಚಿಕೆಯಲ್ಲಿನ ಓಎಲ್‌ಎನ್ ಸಂದರ್ಶನ ಅಪೂರ್ವವಾಗಿದೆ. ಅಲ್ಲಿನ ಅನೇಕ ಸಾಲುಗಳು (ಉದಾ: ಕುರುಕ್ಷೇತ್ರದ ಯುದ್ಧ ನಡೆಯದ ಮನಸ್ಸು, ಸಮುದಾಯ, ದೇಶ...) ಬರೆದು ಇಟ್ಟುಕೊಳ್ಳಬೇಕು ಎನ್ನುವಷ್ಟು ಸೊಗಸಾಗಿವೆ. ಅದೇ ರೀತಿ ದತ್ತ ಬರೆದ ಕುವೆಂಪು ಮತ್ತು ಮಾಸ್ತಿ ಸಂಬಂಧ ಕುರಿತ ಲೇಖನವೂ ಚೆನ್ನಾಗಿದೆ.

**ಪದ್ಮರಾಜ ದಂಡಾವತಿ, ಬೆಂಗಳೂರು**

- ಫೆಬ್ರುವರಿ ತಿಂಗಳ ಮಯೂರ ಸಂಚಿಕೆಯಲ್ಲಿ ಪ್ರಕಟವಾದ ಕವಯತ್ರಿ ಮೀನಾ ಮೈಸೂರು ಅವರ 'ಹುಟ್ಟುಹಬ್ಬ' ಕವಿತೆ ವಾಸ್ತವತೆಗೆ ಹಿಡಿದ ಕನ್ನಡಿಯಾಗಿದೆ. ಕವಿತೆಯನ್ನು ಓದುತ್ತಿದ್ದಂತೆ ಹುಟ್ಟುಹಬ್ಬ, ಹೊಸ ವರ್ಷ, ಆ ಪಾರ್ಟಿ, ಈ ಪಾರ್ಟಿ ಎಂದು ಗೆಳೆಯರ ಜೊತೆ ಸೇರಿ ಕುಡಿತದ ಚಟಕ್ಕೆ ದಾಸನಾಗಿ ಶಿವನ ಪಾದ ಸೇರಿದ ನನ್ನ ಅಣ್ಣನ ನೆನಪಾಗಿ ವಿಷಾದವೆನಿಸಿತು.

**–ಅನಸೂಯ ತ್ರಿವಿಕ್ರಂ, ಕೇದಿಗೆಮನೆ**

- ಪದ್ಮಿನಿ ನಾಗರಾಜು ಅವರ 'ಛತ್ರಿ ಮಹಾತ್ಮೆ' ಪ್ರಬಂಧ ಸ್ವಾರಸ್ಯಕರವಾಗಿತ್ತು. ನೌಕರಿ ನಿಮಿತ್ತ ಇದ್ದ ಬಳ್ಳಾರಿಯ ಉರಿಬಿಸಿಲಲ್ಲಿ ಛತ್ರಿ ಕಾಣದೇ ಬಿಸಿಲಿಗೆ ಬೇಯುತ್ತಿದ್ದ ನಾವು ಮಧ್ಯ ಕರ್ನಾಟಕಕ್ಕೆ ಬಂದ ಮೇಲೆ ಛತ್ರಿಯ ಅನಿವಾರ್ಯತೆ ಎದುರಾಗಿ ಹೊಂದಿಕೊಂಡೆವು. ಬಾಲ್ಯದಲ್ಲಿ ಚಿತ್ರದುರ್ಗ ಜಿಲ್ಲೆಯ ಹಳ್ಳಿಯಿಂದ ಪೇಟೆಯ ಸ್ಕೂಲಿಗೆ ನಡೆದೇ ಹೋಗುತ್ತಿದ್ದ ನಾನು ಮಳೆ ಬಂದಾಗ ಅದರ ಬಿರುಸಿನೆದುರು ಛತ್ರಿ ಹಿಡಿಯಲಾಗದೇ




ಒದ್ದಾಡಿದಾಗ ಅಪ್ಪ ಪ್ಲಾಸ್ಟಿಕ್ ಶೀಟ್‌ನ ಕೊಪ್ಪಾಳೆ ಹೊಲಿಸಿದ್ದು ನೆನಪಾಯಿತು.

**–ಸುಶೀಲಾ ದೇವಿ ಆರ್. ರಾವ್, ದಾವಣಗೆರೆ**

- ಕುವೆಂಪು ಮತ್ತು ಮಾಸ್ತಿ ಸಂವಾದ, ಅಭಿಪ್ರಾಯ ಭೇದ ನಿರೂಪಣೆಯಲ್ಲಿ ಕೂಡ ಸಾರ್ವಜನಿಕದಲ್ಲಿ ಜೀವಂತವಿರುತ್ತಿದ್ದ ಭಾಷಾ ಗಾಂಭೀರ್ಯ ಮತ್ತು ಸಂವೇದನಾಘನತೆ ಆದರ್ಶಪ್ರಾಯವಾಗಿದೆ. ವೈ.ಎಸ್.ವಿ. ದತ್ತ ಅವರ ಬರಹವು ಕಳೆದು ಹೋದದನ್ನು ಹುಡುಕುತ್ತಿರುವಲ್ಲಿ ಕೈದೀಪದಂತಿದೆ.

**ಶಂಕರ್ ಸೊರವನಹಳ್ಳಿ, ಮಾಯಸಂದ್ರ**

- ಫೆಬ್ರುವರಿ ಸಂಚಿಕೆಯಲ್ಲಿ ಯೋಗೀಂದ್ರ ಮರವಂತೆ ಅವರು ಕ್ರಿಕೆಟ್ ಕುರಿತು ಬರೆದ ಪ್ರಬಂಧ ಉತ್ತಮವಾಗಿತ್ತು. ಮಾಹಿತಿಯನ್ನು ಸುಂದರ ಕನ್ನಡದಲ್ಲಿ ಕಟ್ಟಿಕೊಟ್ಟಿದ್ದಾರೆ. ಕ್ರಿಕೆಟ್ ಇಷ್ಟಪಡುವವರಿಗೆ ಮತ್ತು ಕ್ರಿಕೆಟ್ ಕುರಿತು ಅಷ್ಟೇನೂ ಒಲವಿಲ್ಲದವರಿಗೂ 'ಕ್ರಿಕೆಟಿನ ತವರುಮನೆಯ ಕಳವಳಗಳು' ಪ್ರಬಂಧ ಇಷ್ಟವಾಗುತ್ತದೆ.

**ಶಾಲಿನಿ ಶೆಟ್ಟಿ, ಶಿಶಿಲ, ಉಪ್ಪಿನಂಗಡಿ**